ಆ) ಸರ್ಕಾರ ನೀಡುವ ಭೂಮಿಯ ಬೆಲೆಗೆ ಮುಧೋಳ್ ತಾಲ್ಲೂಕಿನ ನೀರಾವರಿ ಗ್ರಾಮಗಳಲ್ಲಿ ಭೂ ಮಾಲೀಕರು ಒಪ್ಪದೇ ಭೂಮಿಯನ್ನು ಖರೀದಿಸಲು ಸಾಧ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಸರ್ಕಾರದ ಕ್ರಮವೇನು?

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು):

ಅ) ಈ ಕೆಳಗಿನ 20 ಗ್ರಾಮಗಳಲ್ಲಿ ನಿವೇಶನ ರಚಿಸಲು ಜಾಗೆ ಇಲ್ಲದಿರುವುದು ಗಮನಕ್ಕೆ ಬಂದಿದೆ.

1) ಸೈದಾಪೂರ (2) ಕೇಸಕೊಪ್ಪ (3) ಬಸನಾಳ (4) ನಂದಂ (5) ದವಳೇಶ್ವರ (6) ಸಂಗಾನಟ್ಟಿ (7) ಮದಬಾವಿ (8) ಮಳಲಿ (9) ಮುಗಳಖೋ (10) ಸೋರಗಾಂವ (11) ಮಂಟೂ (12) ಕಿಸೋಡಿ (13) ಮೇಳ್ಳಿಗೇರಿ (14) ಜೀರಗಾಳ (15) ಯಡಹಳ್ಳಿ (16) ಬಿದರೆ (17) ಬುದ್ನಿಕೆಡಿ (18) ಅಲಗುಂಡಿಚಿಕೆ (19) ಬುದ್ನಿಚಿಕೆ (20) ರೂಗಿ.

ಆ) ಈ 20 ಗ್ರಾಮಗಳು ನೀರಾವರಿ ಪ್ರದೇಶದಲ್ಲಿರುವುದರಿಂದ ಹೆಚ್ಚಿನ ಬೆಲೆಯನ್ನು ಕೇಳುತ್ತಿರುವ ಹಿನ್ನೆಲೆಯಲ್ಲಿ ಭೂಮಿಯನ್ನು ಖರೀದಿಸಲು ಸಾಧ್ಯವಾಗದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ.

ಇ) ಜಮೀನಿನ ಮಾಲೀಕರ ಜೊತೆ ಮಾತುಕತೆ ಮೂಲಕ ಮಾರುಕಟ್ಟೆ ಬೆಲೆ ನಿಗಧಿಪಡಿಸಿ ಜಮೀನು ಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಸರ್ಕಾರ ಅಧಿಕಾರ ನೀಡಿದೆ. ಅದರಂತೆ ಜಿಲ್ಲಾಧಿಕಾರಿಗಳು ಕ್ರಮ ವಹಿಸಿದ್ದಾರೆ.

ವಿಷಯ: ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಮನೆಗಳ ನಿರ್ಮಾಣ.

2614 (3633)

ಶ್ರೀ ಎನ್. ವೈ. ಗೋಪಾಲಕೃಷ್ಣ, ಎಂಎಲ್ಎ.: ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದಲ್ಲಿ 1995-96ನೇ ಸಾಲಿನಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಮಂಜೂರು ಮಾಡಲಾದ ಮನೆಗಳ ಸಂಖ್ಯೆ ಎಷ್ಟು?

ಆ) ಇವುಗಳ ಪೈಕಿ ಎಷ್ಟು ಮನೆಗಳನ್ನು ಈಗಾಗಲೇ ಫಲಾನುಭವಿಗಳಿಗೆ ನೀಡಲಾಗಿದೆ?

ಇ) 97-98ನೇ ಸಾಲಿನಲ್ಲಿ ಒಟ್ಟು ಎಷ್ಟು ಮನೆಗಳನ್ನು ಮಂಜೂರು ಮಾಡಲಾಗಿದೆ?

ಈ) ಈ ಮನೆಗಳನ್ನು ಪೂರ್ಣಗೊಳಿಸಲು ಹಾಗೂ ಹೊಸದಾಗಿ ನಿರ್ಮಿಸಲು 97-98ರಲ್ಲಿ ಸರ್ಕಾರ ಮಂಜೂರು ಮಾಡುವ ಹಣವೆಷ್ಟು?

ಶ್ರೀ ಹೆಚ್.ಡಿ.ರೇವಣ್ಣ (ವಸತಿ ಸಚಿವರು):

ಅ) ಮೊಳಕಾಲ್ಮೂರು ತಾಲ್ಲೂಕಿಗೆ 247 ಮನೆಗಳನ್ನು ಮಂಜೂರು ಮಾಡಲಾಗಿತ್ತು.

ಆ) 181 ಮನೆಗಳು ಪೂರ್ಣಗೊಂಡಿದ್ದು ಇವುಗಳನ್ನು ನೀಡಲಾಗಿದೆ.

ಇ) ರಾಜ್ಯದಲ್ಲಿ ಪ್ರತಿ ತಾಲ್ಲೂಕಿಗೆ 175 ಮನೆಗಳ ಗುರಿಯನ್ನು ನೀಡಿದ್ದು ಮೊಳಕಾಲ್ಮೂರು ತಾಲ್ಲೂಕಿಗೂ ಸಹ 175 ಮನೆಗಳ ನಿರ್ಮಾಣ ಭೌತಿಕ ಗುರಿ ನೀಡಲಾಗಿದೆ.

ಈ) 95-96ನೇ ಸಾಲಿನ ಮನೆಗಳಿಗೆ 37.05 ಲಕ್ಷ ರೂ.ಗಳನ್ನು ಪೂರ್ಣ ಹಣ ಬಿಡುಗಡೆ ಮಾಡಲಾಗಿದೆ. 97-98ನೇ ಸಾಲಿಗೆ ನಿಗದಿ ಪಡಿಸಿದ ಗುರಿಗೆ ಸರ್ಕಾರದಿಂದ 42.04 ಲಕ್ಷ ಸಹಾಯಧನವನ್ನು ಜಿಲ್ಲಾಪಂಚಾಯಿತಿಗೆ ಬಿಡುಗಡೆ ಮಾಡಲಾಗಿದೆ.

ವಿಷಯ: ಶಾಂತಿನಗರದಲ್ಲಿರುವ ಕೊಳಚೆ ಪ್ರದೇಶಗಳು.

2618 (2831)

ಶ್ರೀ ಡಿ.ಜಿ.ಹೇಮಾವತಿ (ಶಾಂತಿನಗರ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಾಂತಿನಗರ ವಿಧಾನ ಸಭಾ ವ್ಯಾಪ್ತಿಯಲ್ಲಿ ಬರುವ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ಕುಟುಂಬಗಳೆಷ್ಟು?

ಆ) 1996-97ನೇ ಸಾಲಿನಲ್ಲಿ ಈ ಕೊಳಚೆ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಖರ್ಚು ಮಾಡಲಾಗಿರುವ ಹಣವೆಷ್ಟು?

ಇ) 1997-98ನೇ ಸಾಲಿನಲ್ಲಿ ಖರ್ಚು ಮಾಡಲು ಉದ್ದೇಶಿಸಿರುವ ಹಣವೆಷ್ಟು?

ಶ್ರೀ ಹೆಚ್.ಡಿ.ರೇವಣ್ಣ (ವಸತಿ ಸಚಿವರು):

ಅ) ಶಾಂತಿನಗರ ವಿಧಾನ ಸಭಾ ವ್ಯಾಪ್ತಿಯಲ್ಲಿ ಒಟ್ಟು 16 ಕೊಳಚೆ ಪ್ರದೇಶಗಳನ್ನು ಗುರುತಿಸಿದ್ದು, 8002 ಕುಟುಂಬಗಳು ವಾಸಿಸುತ್ತಿರುವುದಾಗಿ ಅಂದಾಜು ಮಾಡಲಾಗಿದೆ.